## ನಕ್ಕುಬಿಡಿ





ತಂದೆ: ಸ್ವಾಮಿ ನನ್ನ ಮಗಳು ರಸ್ತೆಯಲ್ಲಿ ಹೋಗುವಾಗ ತಲೆ ತಗ್ಗಿಸಿ ಹೋಗುವ ಹಾಗೆ ಏನಾದರೂ ಮಾರ್ಗ ಹೇಳಿ ಸ್ವಾಮಿ.

ಸ್ವಾಮಿ: ನಿನ್ನ ಮಗಳಿಗೆ ದಿನಕ್ಕೆ 500 ಎಸ್.ಎಂ.ಎಸ್. ಫ್ರೀ ಇರುವ ಸಿಮ್ ಕಾರ್ಡ್ ಕೊಡಿಸು. ತಲೆ ತಗ್ಗಿಸಿ ನಡೆಯುತ್ತಾಳೆ.

★★★

ಮೇಷ್ಟ್ರು: T.M.C. ಎಂದರೆ ಅರ್ಥ ಏನು?

ಗುಂಡ: ತಮಿಳುನಾಡಿಗೇ ಮಾತ್ರ ಕಾವೇರಿ.

★★★

ಹುಡುಗಿ: ಒಂದು ಕವನ ಹೇಳು ಪ್ಲೀಜ್...

ಹುಡುಗ: ನಿನ್ನ ನೋಡಿದಾಗ ನಾ ನನ್ನ ಮರೆತೆ.

ಹುಡುಗಿ: ವಾಹ್, ಸೂಪರ್ ಆ ಮೇಲೆ?

ಹುಡುಗ: ನಿನ್ನ ತಂಗಿಯನ್ನ ನೋಡಿದ್ಮೇಲೆ ನಿನ್ನನ್ನೇ ಮರೆತೆ....

★★★

ಗುಂಡ: ಕಪ್ಪೆಗಳಿಗೆ ಮದುವೆ ಮಾಡಿಸಿದರೆ ಮಳೆ ಬರುತ್ತದೆ ಎಂದು ಎರಡು ಕಪ್ಪೆಗಳಿಗೆ ಮದುವೆ ಮಾಡಿಸಿದೆವು. ಆದರೆ ಈಗ ಮಳೆ ಜಾಸ್ತಿಯಾಗಿದೆ ಏನು ಮಾಡುವುದು?

ಹನುಮ: ಕಪ್ಪೆಗಳಿಗೆ ಡೈವರ್ಸ್ ಕೊಡಿಸಬೇಕು.

**(ಸಂಗ್ರಹ) ನೀತಾ ಕೆ.ಎಸ್.**

ನಿವೃತ್ತ ಮೇಜರ್ ಸಾಹೇಬರನ್ನು ಯಾರೋ ಪ್ರಶ್ನಿಸಿದರು. 'ನೀವು ಇಬ್ಬರು ರಾಜಕೀಯ ಧುರೀಣರೊಂದಿಗೆ ಕಾಡಿನಲ್ಲಿ ಹಾದು ಹೋಗುತ್ತಿದ್ದೀರಿ ಎಂದಿಟ್ಟುಕೊಳ್ಳಿ. ಒಬ್ಬರಿಗೆ ಅರವತ್ತು ವರ್ಷ, ಇನ್ನೊಬ್ಬರಿಗೆ ನಲ್ವತ್ತು ವರ್ಷ. ನಿಮ್ಮ ಕೈಯಲ್ಲಿ ಬಂದೂಕಿದೆ. ಆಗ ಇದ್ದಕ್ಕಿದ್ದಂತೆ ಎಲ್ಲಿಂದಲೋ ಹುಲಿಯೊಂದು ಹಾರಿ ನಿಮ್ಮೆದುರಿಗೆ ಬರುತ್ತದೆ. ಆಗ ನೀವು ಮೊದಲು ಯಾವ ಧುರೀಣರನ್ನು ಉಳಿಸಲು ಪ್ರಯತ್ನಿಸುವಿರಿ?'

'ನೋಡಿ, ಭಾರತದಲ್ಲಿ ಹುಲಿಗಳ ಸಂಖ್ಯೆ ಕಡಿಮೆಯಿದೆ. ನಾನು ಹುಲಿಯನ್ನು ಆ ಇಬ್ಬರೂ ರಾಜಕೀಯ ಧುರೀಣರಿಂದ ಪಾರು ಮಾಡಲು ಪ್ರಯತ್ನಿಸುತ್ತೇನೆ'. ಮೇಜರ್ ಶಾಂತ ಚಿತ್ತದಿಂದ ಹೇಳಿದರು.

★★★

ಒಮ್ಮೆ ಮಾರ್ಕ್ ಟ್ವೇನ್ ತಮ್ಮ ನೆರೆಮನೆಯವನಲ್ಲಿ, ಓದಲು ಪುಸ್ತಕವನ್ನು ಯಾಚಿಸಿದರು.

'ಖಂಡಿತ ಓದಿ, ಆದರೆ ಪುಸ್ತಕವನ್ನು ಇಲ್ಲಿಯೇ ಕುಳಿತು ಓದಿ. ನಾನು ಯಾರಿಗೂ ಪುಸ್ತಕಗಳನ್ನು ಮನೆಯಿಂದ ಹೊರಗೆ ತೆಗೆದುಕೊಂಡು ಹೋಗಲು ಬಿಡುವುದಿಲ್ಲ'

ಕೆಲವು ದಿನಗಳು ಕಳೆದವು. ಮಾರ್ಕ್ ಟ್ವೇನ್ ನೆರೆಮನೆಯವನು ಬಂದು ಮಾರ್ಕ್ ಟ್ವೇನ್‌ರಲ್ಲಿ ಕಸಪರಿಕೆಯನ್ನು ಯಾಚಿಸಿದ.

'ಖಂಡಿತ ಕಸಪರಿಕೆಯನ್ನು ಕೊಡ್ತೀನಿ, ಆದರೆ ಇಲ್ಲಿ ಮಾತ್ರ ಕಸಪರಿಕೆಯನ್ನು ಉಪಯೋಗಿಸಿ, ನಿಮಗೆ ಗೊತ್ತೇ ಇದೆ, ನಾನೂ ಸಹ ಯಾವುದನ್ನೂ ಮನೆಯಿಂದ ಹೊರಗೆ ತೆಗೆದುಕೊಂಡು ಹೋಗಲು ಬಿಡುವುದಿಲ್ಲ' ಎಂದರು ಮಾರ್ಕ್ ಟ್ವೇನ್.

**(ಸಂಗ್ರಹ) ಡಿ.ಎನ್. ಶ್ರೀನಾಥ್**




# ಮಹಿಳೆಯ ಸೌಂದರ್ಯವರ್ಧನೆಗೆ ಕಾಸ್ಮೆಟಿಕ್ ಸರ್ಜರಿ



ಮಹಿಳೆಯರು, ಯಾವುದೇ ಅಂಗ ಸ್ವಲ್ಪ ಏರುಪೇರಾಗಿದ್ದರೂ ಅದರಲ್ಲೂ ಸ್ತನಗಳ ವಿಷಯ ಬಂದಾಗ ಬಹಳ ಮುಜುಗರಕ್ಕೆ ಒಳಗಾಗಿ ಮಾನಸಿಕವಾಗಿ ಕುಗ್ಗಿಹೋಗುತ್ತಾರೆ. ಸ್ನೇಹಿತರ ಜೊತೆಯಲ್ಲಿ ಅಥವಾ ಸಾಮಾಜಿಕ ಚಟುವಟಿಕೆಗಳಲ್ಲಿ ಭಾಗವಹಿಸುವಲ್ಲಿ ಹಿಂಜರಿಯುತ್ತಾರೆ. ಸರಿಯಾದ ಉಡುಪುಗಳನ್ನು ಧರಿಸಲು ಆಗದೆ ಹೋದಾಗ ತುಂಬಾ ವ್ಯಥೆಪಡುತ್ತಾರೆ.

ಈ ನಿಟ್ಟಿನಲ್ಲಿ ಸೌಂದರ್ಯವರ್ಧನ ಸ್ತನ ಶಸ್ತ್ರಚಿಕಿತ್ಸೆಗಳ ಮೂಲಕ ಸರಿಯಾದ ಪರಿಹಾರ ಕಂಡುಕೊಳ್ಳಬಹುದು. ಈ ಶಸ್ತ್ರಚಿಕಿತ್ಸೆಗಳು ಸುರಕ್ಷಿತವಾಗಿದ್ದು, ಬಹುತೇಕ ಒಂದು ದಿನದಲ್ಲೇ ಹಿಂತಿರುಗಬಹುದು. ಹಾಲುಣಿಸುವುದಕ್ಕೆ ಯಾವುದೇ ತೊಂದರೆಗಳು ಇರುವುದಿಲ್ಲ ಹಾಗೂ ಸ್ತನದ ಕ್ಯಾನ್ಸರ್ ಬರುವ ಸಾಧ್ಯತೆ ಇರುವುದಿಲ್ಲ. 18 ವಯಸ್ಸಿನ ನಂತರ ಯಾವುದೇ ಮಹಿಳೆ ಈ ಶಸ್ತ್ರಚಿಕಿತ್ಸೆಗೆ ಒಳಗಾಗಬಹುದು.

**Breast Augmentation (ಸ್ತನಗಳ ಗಾತ್ರ ಹೆಚ್ಚಿಸುವುದು)** : ಯಾವುದೇ ಮಹಿಳೆ 18 ರ ನಂತರ ಅಥವಾ ಹೆರಿಗೆಯ ನಂತರ ತಮ್ಮ ಸ್ತನಗಳ ಗಾತ್ರ ಹೆಚ್ಚಿಸಲು ಇಚ್ಚಿಸಿದರೆ Silicon Implants ಸರ್ಜರಿ ಮೂಲಕ ಪರಿಹಾರ ಕಂಡುಕೊಳ್ಳಬಹುದು, ನಂತರ ಜೀವನಪರ್ಯಂತ ಗಾತ್ರದಲ್ಲಿ ಯಾವುದೇ ಬದಲಾವಣೆಗಳಿರುವುದಿಲ್ಲ. ಸ್ತನಗಳ ಗಾತ್ರವನ್ನು ದೇಹಕ್ಕೆ ಹೊಂದಾಣಿಕೆಯಾಗುವಂತೆ ಮಾಡಲಾಗುವುದು.

**Breast Reduction (ಸ್ತನಗಳ ಗಾತ್ರ ಕಡಿಮೆ ಮಾಡುವುದು)** : ದೊಡ್ಡ ಸ್ತನಗಳಿಂದ ಎದೆನೋವು, ಕುತ್ತಿಗೆನೋವು, ಬೆನ್ನುನೋವು, ಮತ್ತು ಖಿನ್ನತೆಗೆ ಒಳಗಾಗುತ್ತಾರೆ. ಸ್ತನಗಳ ಗಾತ್ರವನ್ನು ದೇಹಕ್ಕೆ ಸರಿಯಾಗಿ ಹೊಂದಾಣಿಕೆಯಾಗುವಂತೆ ಮಾಡಲಾಗುತ್ತದೆ. ಸರ್ಜರಿಯ ನಂತರ ಗಾತ್ರ ಹೆಚ್ಚಾಗುವ ಸಾಧ್ಯತೆಗಳು ಇರುವುದಿಲ್ಲ ಮತ್ತು ವಯೋಮಾನಕ್ಕನುಗುಣವಾಗಿ ಆಗುವ ಬದಲಾವಣೆಗಳು ಸಾಮಾನ್ಯ.

**ಇನ್ನಿತರ ಸೇವೆಗಳು** : ಹೇರ್ ಟ್ರಾನ್ಸ್‌ಪ್ಲಾಂಟೇಷನ್, ಬೊಜ್ಜುತನಕ್ಕೆ ಸರ್ಜರಿ, ಮೂಗಿನ ವಿಕಾರತೆ ಸರಿಪಡಿಸುವುದು, ಕೆನ್ನೆಗುಳಿ, ಮುಖದ ಕಾಸ್ಮೆಟಿಕ್ ಸರ್ಜರಿಗಳು, ಪುರುಷರ ಎದೆಯ ಸರ್ಜರಿ ಇತ್ಯಾದಿ...

**ಡಾ : ಗಿರೀಶ್ ಎ. ಸಿ.,** MBBS, MS, MCh (Plastic Surgery)

**ಪ್ಲಾಸ್ಟಿಕ್ ಮತ್ತು ಕಾಸ್ಮೆಟಿಕ್ ಸರ್ಜನ್,**

**ಕರ್ಲ್ಸ್ ಮತ್ತು ಕರ್ವ್ಸ್ ಹೇರ್‌ಟ್ರಾನ್ಸ್‌ಪ್ಲಾಂಟೇಷನ್ ಮತ್ತು ಕಾಸ್ಮೆಟಿಕ್ ಸರ್ಜರಿ ಸೆಂಟರ್, ನಂ. 49, ಮೊದಲನೇ ಮಹಡಿ, ವೆಸ್ಟ್ ಆಫ್ ಕಾರ್ಡ್ ರಸ್ತೆ, 6ನೇ ಹಂತ, ಮಹಾಗಣಪತಿನಗರ, ವಾರಿಯರ್ ಬೇಕರಿ ಎದುರು, ರಾಜಾಜಿನಗರ, ಬೆಂಗಳೂರು.**

www.curlsncurves.com

**8088400400** **9448571216**

"ಭಾರತ್ ಜ್ಯೋತಿ" ಮತ್ತು "ಅತ್ಯಂತ ಭರವಸೆಯ ಕಾಸ್ಮೆಟಿಕ್ ಸರ್ಜರಿ ಸೆಂಟರ್" ಈ ಪ್ರಶಸ್ತಿಗಳಲ್ಲದೆ ಇನ್ನಿತರ ಹಲವಾರು ಪ್ರತಿಷ್ಠಿತ ಪ್ರಶಸ್ತಿ ವಿಜೇತರು

**ಎಲ್ಲಾ ಕಾಸ್ಮೆಟಿಕ್ ಸರ್ಜರಿಗಳ ಬಗ್ಗೆ ಹೆಚ್ಚಿನ ಮಾಹಿತಿಗಾಗಿ ಪ್ರತೀ ಸೋಮವಾರ ಮಧ್ಯಾಹ್ನ 1.30ಕ್ಕೆ ಪಬ್ಲಿಕ್ ನ್ಯೂಸ್ ಚಾನಲ್ ವೀಕ್ಷಿಸಿ**